# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **61** |
| **ಸದಸ್ಯರ ಹೆಸರು** | **ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ** |
| **ಉತ್ತರಿಸಬೇಕಾದ ದಿನಾಂಕ** | **07.12.2020** |
| **ಉತ್ತರಿಸುವ ಸಚಿವರು** | **ಮಾನ್ಯ ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.** |
| **ಪ್ರಶ್ನೆ** | **ಉತ್ತರ** |
| ಅ) ಸರ್ಕಾರದಿಂದ ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಎಷ್ಟು ಸ್ಟಾರ್ಟ್ ಅಪ್ ಸಂಸ್ಥೆಗಳಿಗೆ ಸಹಾಯಧನ ಹಾಗೂ ಇನ್ನಿತರ ಸೌಲಭ್ಯಗಳನ್ನು ನೀಡಲಾಗಿದೆ; (ವಿವರ ನೀಡುವುದು) | ಕರ್ನಾಟಕ ಸ್ಟಾರ್ಟ್ಅಪ್ ನೀತಿಯನ್ನು 2015 ವರ್ಷದ ಕೊನೆಯಲ್ಲಿ ಜಾರಿಗೆ ತರಲಾಗಿದೆ. ಈ ನೀತಿಯಡಿಯಲ್ಲಿ, ಎಲಿವೇಟ್-ಐಡಿಯಾ2ಪಿಓಸಿ ಕಾರ್ಯಕ್ರಮದಡಿ , ಕಳೆದ 5 ವರ್ಷಗಳಲ್ಲಿ, ಒಟ್ಟು 504 ನವೋದ್ಯಮಗಳಿಗೆ ಆರ್ಥಿಕವಾಗಿ ಅಥವಾ ಇನ್ನಿತರ ರೀತಿಯಲ್ಲಿ ಬೆಂಬಲಿಸಲಾಗಿರುತ್ತದೆ. ಈ ಎಲ್ಲ ನವೋದ್ಯಮಗಳು ಕರ್ನಾಟಕದಲ್ಲಿ ನೆಲೆಯಿರುವಂಥವಾಗಿರುತ್ತವೆ. 470 ನವೋದ್ಯಮಗಳು ರೂ.107 ಕೋಟಿಗಳಷ್ಟು ಸರ್ಕಾರದ ಅನುದಾನವನ್ನು ಪಡೆದುಕೊಂಡಿದ್ದು, ಇನ್ನಿತರ 34 ನವೋದ್ಯಮಗಳು - ಪೇಟೆಂಟ್ ಗಾಗಿ ತಗಲಿದ ವೆಚ್ಚದ ಮರುಪಾವತಿ, ಮಾರುಕಟ್ಟೆಗಾಗಿ ಪ್ರೋತ್ಸಾಹಕ, ಜಿ.ಎಸ್.ಟಿ. ಹಿಂಪಾವತಿ ಮತ್ತಿತರ ಸೌಲಭ್ಯಗಳ ಪ್ರೋತ್ಸಾಹಕಗಳಾಗಿ ಅಂದಾಜು ರೂ.55.00 ಲಕ್ಷಗಳಷ್ಟು ಮೊತ್ತವನ್ನು ಪಡೆದುಕೊಂಡಿವೆ. ಸುಮಾರು 6000 ಸ್ಥಳೀಯ ಉದ್ಯೋಗಿಗಳಿಗೆ ಸದರಿ ನವೋದ್ಯಮ ಸಂಸ್ಥೆಗಳಿಂದ ಉದ್ಯೋಗವನ್ನು ನೀಡಲಾಗಿದೆ. |
| ಆ) ಇಲ್ಲಿಯವರೆಗೆ ಕರ್ನಾಟಕ ರಾಜ್ಯ ನಿವಾಸಿಗಳ ಎಷ್ಟು ಸ್ಟಾರ್ಟ್ ಅಪ್ ಸಂಸ್ಥೆಗಳಿಗೆ ಸಹಾಯಧನ ನೀಡಲಾಗಿದೆ: | |
| ಇ) ಸದರಿ ಸ್ಟಾರ್ಟ್ ಅಪ್ ಸಂಸ್ಥೆಗಳಿಂದ ಸ್ಥಳೀಯರಿಗೆ ಒದಗಿಸಲಾದ ಉದ್ಯೋಗಗಳ ಸಂಖ್ಯೆ ಎಷ್ಟು; ಎಲಿಮೇಟೆಡ್ 100 ಯೋಜನೆಯಡಿ ಕಳೆದ 10 ವರ್ಷಗಳ ಅವಧಿಯಲ್ಲಿ ಸರ್ಕಾರದಿಂದ ನೀಡಿರುವ ಅನುದಾನವೆಷ್ಟು? | |

(ಐಟಿಬಿಟಿ 62 ಎಲ್‌ಸಿಎಂ 2020)

**(ಡಾ|| ಅಶ್ವಥ್ ನಾರಾಯಣ್ ಸಿ.ಎನ್)**
ಉಪಮುಖ್ಯಮಂತ್ರಿಗಳು ಹಾಗೂ ವಿದ್ಯುನ್ಮಾನ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ
ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.